
## ಪದಬಂಧ




**ಎಡದಿಂದ ಬಲಕ್ಕೆ**

1. ಒಳ್ಳೆಯ ಸಂಭಾವನೆಯನ್ನು ಗಳಿಸಿ ತಂದ ನೋಡಿ ಗೌರವಾನ್ವಿತ 4
3. ಇಷ್ಟು ಕರ್ರಗಾಗಿದೆ ಏಕೆ ಹಸ್ತದ ಮುಂತುದಿ? 3
4. ನಿತ್ಯವೂ ಮೊಸರನ್ನು ಸರಬರಾಜು ಮಾಡಲು ಎಷ್ಟು ಶುಲ್ಕ? 3
6. ಹಣವನ್ನಿರಿಸಿ ಪ್ರದರ್ಶಿಸಲು ಬಳಸಿದ್ದು ಈ ವಿಶಾಲ ತಟ್ಟೆ 4
7. ಅಂದೇ ಸಂಬಂಧಿಗಳನ್ನೆಲ್ಲ ಕರೆದೊಯ್ದು ತೋರಿಸಿದ್ದು ಇದೇ ಸಮುದ್ರ 3
9. ಸುಂದರ ದ್ವೀಪಗಳಿಂದ ಸಿಂಗಾರಗೊಂಡಂತಿದೆ ಕಡಲು 3
11. ಅಡವಿಯಲ್ಲೇ ಶಿಬಿರ ಹೂಡಿದ್ದಾನೆ ಪ್ರಾಣಿಗಳ ಬೇಟೆಗಾರ 3
13. ಹಸಿದು ಬಂದವರನ್ನೆಲ್ಲ ನಿಭಾಯಿಸಲು ತುಂಬ ತಾಳ್ಮೆ ಬೇಕು 3
15. ಅಂಬರೀಶನ ಕೆಲಸವೇ ದೇವರಿಗೆ ಪವಿತ್ರ ಸ್ನಾನ ಮಾಡಿಸುವುದು 4
17. ವಿರಮಿಸುವ ಮೊದಲು ಆ ಶಿಶುವನ್ನು ರಂಜಿಸಿ ಸಮಾಧಾನಪಡಿಸು 3
18. ಕಣ್ಣೀರನ್ನು ಕಂಡರೇ ಮನ ಕರಗುವಂಥ ದಯಾಮಯಿ 3
19. ತನ್ನ ಭಾಮೆಯ ಬಗೆಗೆ ಆತನಿಗೆ ಸುಂದರ ಮನೋಧರ್ಮ 4

**ಮೇಲಿನಿಂದ ಕೆಳಕ್ಕೆ**

1. ಶನಿ ಗ್ರಹದ ಬಗೆಗೆ ಇಲ್ಲಿದೆ ನೋಡಿ ಹೇರಳ ಮಾಹಿತಿಗಳ ಶೇಖರಣೆ 3
2. ಅಷ್ಟು ಬೃಹತ್ ತೋರಣ ನಿರ್ಮಿಸಲು ಯುವಕನೇ ಬೇಕು 3
3. ನೆರೆಯ ರೈತ ಬೆಳೆದ ಕಬ್ಬಿನ ರಾಶಿಯನ್ನು ಕಂಡು ಹೊಟ್ಟೆಕಿಚ್ಚು 3
5. ಮರುಗುವ ಸ್ಥಿತಿ ತಲುಪಿದವರನ್ನು ಉದ್ಧರಿಸಿದ್ದು ಶ್ರೀ ಕೃಷ್ಣನೇ ತಾನೇ? 3
7. ಸುಂಕಗಳ ನಿರಂತರ ಏರಿಕೆಗೆ ಕಡೆಗೂ ಬಂತು ನಿಯಂತ್ರಣ 3
8. ಕರೆದರೂ ಬಾರದೆ ದಿಕ್ಕು ದಿಕ್ಕುಗಳಲ್ಲೂ ತಿರಸ್ಕಾರದ ಕೂಗನ್ನೆಬ್ಬಿಸಿದರೇ ? 3
9. ವಸಾಹತು ಸ್ಥಾಪಿಸುವುದೆಂದರೆ ಭಾರೀ ಶೌರ್ಯದ ಕೆಲಸವೇ ಹೌದು 3
10. ವೀರರನ್ನೆಲ್ಲ ಸಮರಾಭ್ಯಾಸಕ್ಕಾಗಿ ಬೇರೆಡೆಗೆ ಸಾಗಿಸಿದರೇ? 3
12. ಬೇವಿನ ಮರದ ಸ್ವಾಮ್ಯಕ್ಕಾಗಿ ಯುದ್ಧವೇ ನಡೆಯಿತು 3
14. ಬಿದಿರು ಹೆಣೆಯುವವರ ಮನೆಯಲ್ಲಿ ಯಾವುದೀ ಜಿಂಕೆ? 3
15.ಅಸ್ತ್ರಗಳ ಪ್ರಯೋಗಕ್ಕೂ ಜಗ್ಗದ ರಾಕ್ಷಸ ಅವನು 3
16. ಕಾಗೆ ಕುಕ್ಕುವುದನ್ನೂ ಅರಿಯಲಾರದ ಪೆದ್ದ ಆತ 3

---

### 11-09-2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಧ್ಯಯನ 3. ವಿಕೋಪ 4. ವರ್ತಕ 6. ಕನವರ 7. ತಳಹದಿ 9. ಯಕ್ಷಲೋಕ 12. ಕಾಳಧನ 14. ವಂಚಕ 15. ಕಳಂಕ 16. ತರಗೆಲೆ


**ಮೇಲಿನಿಂದ ಕೆಳಕ್ಕೆ**

1. ಅಪಕಾರ 2. ನವನೀತ 3. ವಿಧಾನ 5. ಕಲಹ 6. ಕಲಾಮಯ 8. ದಿಟ್ಟತನ 10. ಕ್ಷಣಿಕ 11. ಕಲಾವಿದ 12. ಕಾಷ್ಠಕಲೆ 13. ಧನಿಕ

**ಪ್ರಶ್ನಾಂಕಣ**

# ಕುಟುಕಿದ ಜೇನ್ನೊಣ ಸಾಯುವುದು ಏಕೆ?

ಜೇನ್ನೊಣಗಳಲ್ಲಿ ಇಪ್ಪತ್ತು ಸಾವಿರ ಪ್ರಭೇದಗಳಿವೆ. ಈ ಎಲ್ಲ ಪ್ರಭೇದಗಳ ಹೆಣ್ಣು ಕೀಟಗಳಿಗೂ ಅವುಗಳ ಶರೀರದ ಹಿಂತುದಿಯಲ್ಲಿ ಸೂಜಿಯಂತೆ ಮೊನಚಾದ ಒಂದು 'ಕುಟುಕುವ ಅಂಗ' (Sting) ಇದೆ. ಆದರೂ ಈ ಇಪ್ಪತ್ತು ಸಾವಿರ ಪ್ರಭೇದಗಳ ಪೈಕಿ ಸುಮಾರು 500 ಪ್ರಭೇದಗಳಿಗೆ ಕುಟುಕುವ ಸಾಮರ್ಥ್ಯ ಇಲ್ಲ. ಸುಮಾರು 15000 ಪ್ರಭೇದಗಳು ಅಪಾಯ ಎದುರಾದಾಗಲೆಲ್ಲ ತಮ್ಮ ನಯವಾದ ಸೂಜಿಯಂತಹ ಕುಟುಕುವ ಅಂಗದಿಂದ ಶತ್ರುವನ್ನು ಚುಚ್ಚಿ ವಿಷವನ್ನು ಸ್ರವಿಸುತ್ತವೆ. ಅವು ಹಾಗೆ ತಮ್ಮ ಜೀವನ ಪೂರ್ತಿ ಎಷ್ಟು ಬಾರಿ ಬೇಕಾದರೂ ಕುಟುಕಬಲ್ಲವು. ಆದರೆ ಜೇನ್ನೊಣಗಳ ಎಂಟು ಪ್ರಭೇದಗಳು ಮಾತ್ರ (ಚಿತ್ರ 1, 3 ಮತ್ತು 4) ಮೇಣವನ್ನು ಉತ್ಪಾದಿಸಿ ಬಹುಕೊಠಡಿಗಳ ಜೇನುಹುಟ್ಟನ್ನು ನಿರ್ಮಿಸುತ್ತವೆ; ಸಾವಿರಾರು ಸಂಖ್ಯೆಯಲ್ಲಿ ಒಂದು 'ರಾಣಿ'ಯ (ಚಿತ್ರ 2) ನಿಯಂತ್ರಣದಲ್ಲಿ ಉಳಿದು ಸಹ ಜೀವನವನ್ನು ನಡೆಸುತ್ತವೆ; ಹೂಗಳಿಂದ ಮಕರಂದವನ್ನು ತಂದು ಜೇನುಹುಟ್ಟಿನಲ್ಲಿ ಸಂಗ್ರಹಿಸಿ ಅದನ್ನೆಲ್ಲ ಜೇನನ್ನಾಗಿ ಪರಿವರ್ತಿಸುತ್ತವೆ. ಈ ಎಂಟು ಪ್ರಭೇದಗಳ ಕೆಲಸಗಾರ ಜೇನ್ನೊಣಗಳು ಮಾತ್ರ (ಅವೆಲ್ಲ ಹೆಣ್ಣುಗಳು) ಮನುಷ್ಯರನ್ನಾಗಲೀ, ಇತರ ಪ್ರಾಣಿಗಳನ್ನೇ ಆಗಲೀ ಕುಟುಕಿದರೆ ನಂತರ ಅನತಿ ಕಾಲದಲ್ಲೇ ಪ್ರಾಣಬಿಡುತ್ತವೆ! ಏಕೆ ಹೀಗೆ?




ಅದಕ್ಕೆ ಈ ಎಂಟು ಪ್ರಭೇದಗಳ ಜೇನ್ನೊಣಗಳ ಕುಟುಕುವ ಅಂಗದ ವಿಭಿನ್ನ, ವಿಶಿಷ್ಟ ರಚನಾ ಸ್ವರೂಪವೇ ಕಾರಣ. ಈ ವರ್ಗದ ಜೇನ್ನೊಣಗಳ ಸೂಜಿಯಂತಹ ರಚನೆಯ ಕುಟುಕುವ ಅಂಗದ ಅಕ್ಕಪಕ್ಕಗಳಲ್ಲಿ ಸ್ವಲ್ಪ ಮೇಲ್ಮುಖವಾಗಿ ಬಾಗಿದ ಮುಳ್ಳಿನಂತಹ ಕವಲುಗಳು ಇರುತ್ತವೆ. ಈ ಜೇನ್ನೊಣಗಳ ಕೆಲಸಗಾರರು ದಾಳಿ ಮಾಡುವಾಗ ತಮ್ಮ ಕುಟುಕುವ ಅಂಗವನ್ನು ಹೊರಕ್ಕೆ ಚಾಚಿಸಿ ಶತ್ರುವನ್ನು ಕುಟುಕುತ್ತವೆ; ಜೊತೆಗೆ ಉರಿ ತರುವ ವಿಷವನ್ನೂ ಸ್ರವಿಸುತ್ತವೆ. ಅಷ್ಟಾದ ಬಳಿಕ ತಮ್ಮ ಕುಟುಕುವ ಅಂಗವನ್ನು ಶತ್ರುವಿನ ಮೈಯಿಂದ ಹೊರಕ್ಕೆ ಬಲವಾಗಿ ಎಳೆಯುತ್ತವೆ. ಹಾಗೆ ಮಾಡಿದಾಗ ಮೇಲ್ಮುಖವಾಗಿ ಬಾಗಿದ ಮುಳ್ಳುಗಳಿಂದಾಗಿ ಇಡೀ ಕುಟುಕುವ ಅಂಗವೇ ಜೇನ್ನೊಣದ ಮೈಯಿಂದ ಕಿತ್ತುಬರುತ್ತದೆ. ಜೊತೆಗೇ ಜೇನ್ನೊಣದ ಹೊಟ್ಟೆ ಭಾಗದ ಆಂತರ್ಯದ ಜೀರ್ಣಾಂಗ, ಮಾಂಸಖಂಡಗಳು ಮತ್ತು ನರ ಜೀವಕೋಶಗಳು ಛಿದ್ರಗೊಂಡು ಹೊರಬರುತ್ತವೆ. ತತ್ಪರಿಣಾಮವಾಗಿ ಜೇನ್ನೊಣ ಪ್ರಾಣ ಬಿಡುತ್ತದೆ.

ವಿಸ್ಮಯ ಏನೆಂದರೆ ಹೀಗೆ ಸಾಯುವ ಮೊದಲು ಇಂಥ ಕೆಲಸಗಾರ್ತಿ ಜೇನ್ನೊಣಗಳು ತಮ್ಮ ಶರೀರದಿಂದ ಒಂದು ವಿಶಿಷ್ಟ ಅಪಾಯ ಸೂಚಕ ವಾಸನಾ ರಾಸಾಯನಿಕವನ್ನು ಸ್ರವಿಸುತ್ತವೆ. ಗಾಳಿಯಲ್ಲಿ ಹರಡುವ ಆ ವಾಸನೆಯನ್ನು ಗ್ರಹಿಸುವ ಇತರ ಎಲ್ಲ ಕೆಲಸಗಾರ್ತಿಯರು ಗುಂಪು ಗುಂಪಾಗಿ ಬಂದು ಅದೇ ಶತ್ರುವಿನ ಮೇಲೆರಗಿ ಕುಟುಕುತ್ತವೆ; ತಾವೂ ಸತ್ತು ಬೀಳುತ್ತವೆ. ಶತ್ರುವಂತೂ ವಿಷದ ಉರಿಯಿಂದ ಕಂಗೆಟ್ಟು ಓಡಿಹೋಗುತ್ತದೆ.

**■ ಎನ್. ವಾಸುದೇವ್**